ಸಿ.ಸಿ ನಂಬ್ರ: 4/2024
ಪಿ.ಡಬ್ಲ್ಯೂ : 1

ದಿನಾಂಕಃ 07-05-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್. ಎ. ಎಸ್ ವಕೀಲರಿಂದ

1. ನಮ್ಮ ಊರು ಗಂಗೊಳ್ಳಿ ಎಂದರೆ ಸರಿ. ಆರೋಪಿತ ಮಂಗಳೂರಿನವರು ಎಂದರೆ ಸರಿ. ವ್ಯವಹಾರ ಇದ್ದಿದ್ದು ಆರೋಪಿಗೂ ಹಾಗೂ ಜಾಪರ್ ರವರಿಗೆ. ಜಾಪರ್ ಸಾಹೇಬರ ಬಾಡಿಗೆ ಮನೆಯಲ್ಲಿ ಆರೋಪಿತ ಇದ್ದಿದ್ದು ನಾನೇ ಅವರಿಗೆ ಬಾಡಿಗೆ ಮನೆ ಕೊಡಿಸಿರುತ್ತೇನೆ. ಬಾಡಿಗೆ ಮನೆಯನ್ನು ಆರೋಪಿತ ವಾಸ ಇರುವ ಉದ್ದೇಶಕ್ಕೆ ತೆಗೆದುಕೊಂಡಿರುತ್ತಾನೆ. 36 ಸಾವಿರ ರೂ. ಬಾಡಿಗೆ ಇರುತ್ತದೆ. ಅಡ್ವಾನ್ಸ್ ಎಷ್ಟು ಎಂದು ಗೊತ್ತಿರುವುದಿಲ್ಲ. 2020 ರಿಂದ ಅವರು ಬಾಡಿಗೆಗೆ ಇದ್ದು ಅವರು ಕಾಲಕಾಲಕ್ಕೆ ಬಾಡಿಗೆ ಕೊಡುತ್ತಿದ್ದರು. ಈ ಬಗ್ಗೆ ನಾನು ಯಾವುದೇ ಬಾಡಿಗೆ ಕರಾರು ಹಾಜರು ಪಡಿಸಿರುವುದಿಲ್ಲ. ಆ ದಾಖಲೆ ಅವರ ಬಳಿ ಇರುತ್ತದೆ.

2. ಆರೋಪಿಗೆ ವ್ಯವಹಾರದಲ್ಲಿ ನಷ್ಟ ಆಗಿದ್ದರಿಂದ ಬಾಡಿಗೆ ಕೊಟ್ಟಿರುವುದಿಲ್ಲ. ಆ ಬಾಡಿಗೆ ಹಣವನ್ನು ಕೊಡಿಸುವ ಜವಬ್ದಾರಿ ನನ್ನ ಮೇಲೆ ಹಾಕಿದ್ದರು. ನನಗೂ ಸಹ ಮೀನಿನ ದುಡ್ಡು ಆರೋಪಿತ ಕೊಡಬೇಕಿತ್ತು. ನನಗೆ 1,60,000/- ರೂ. ಬರಬೇಕಿತ್ತು. 3 ಲಕ್ಷ ಹಣವನ್ನು ನಾನೇ ಮನೆಯ ಮಾಲೀಕ ಜಾಪರ್ ರವರಿಗೆ ಆರೋಪಿ ಪರವಾಗಿ ಕೊಟ್ಟಿರುತ್ತೇನೆ. ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಸಮಾಜ ಸೇವಕ ಎಂದರೆ ಸರಿಯಲ್ಲ. ಬೈಂದೂರು ಕ್ಷೇತ್ರದಲ್ಲಿ ವಿಧಾನ ಸಭೆಯ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿದ್ದೆ ಎಂದರೆ ಸರಿ. ನಾನು ನ್ಯಾಯಲಯಕ್ಕೆ ಸುಮಾರು ಬಾರಿ ಬಂದಿದ್ದೆ ಎಂದರೆ ಸರಿ, ಸಾಕ್ಷಿ ನಾನು ಸಾಕ್ಷಿದಾರನಾಗಿ ಬಂದಿರುವುದಿಲ್ಲ, ನನ್ನ ಪ್ರಕರಣಕ್ಕೆ ಬಂದಿರುತ್ತೇನೆ. ನಮ್ಮ ಸಿವಿಲ್ ವ್ಯಾಜ್ಯ ಇತ್ಯರ್ಥಕ್ಕೆ ಇರುತ್ತದೆ ಎಂದು ನುಡಿಯುತ್ತಾರೆ.

3. ಚೆಕ್ ನ ಇನ್ನೊಂದು ಪ್ರಕರಣಕ್ಕೆ ಹಾಜರಾಗಿರುತ್ತೇನೆ. ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದೂರಿನಲ್ಲಿ 4,40,000/- ಎಂದು ನಮೂದು ಇರುವುದು ಬಿಟ್ಟು ಆರೋಪಿತ ಹಣ ಕೊಡಬೇಕೆಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2023 ರಲ್ಲಿ ಆರೋಪಿ ಮನೆಯ ಒನರ್ ಗೆ ಕೊಡಬೇಕಾದ ಹಣವನ್ನು ನಾನೇ ಕಂತು ಕಂತಿನಲ್ಲಿ ಕಟ್ಟಿರುತ್ತೇನೆ. ಆ ಸಮಯದಲ್ಲಿ ಆರೋಪಿಗೂ ನನಗೂ ಒಳ್ಳೆಯ ಬಾಂದವ್ಯ ಇತ್ತು ಎಂದರೆ ಸರಿ. ನನ್ನ ಹಾಗೂ ಜಾಪರ್ ನ ನಡುವೆ ಆ ವ್ಯವಹಾರದ ಬಗ್ಗೆ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ದಾಖಲೆ ಮಾಡಿಕೊಳ್ಳಬೇಕೆಂಬ ಅನುಭವ ಇರುತ್ತದೆ, ಆರೋಪಿತ ಒಪ್ಪಿಕೊಂಡಿದ್ದರಿಂದ ಹಾಗೂ ಸ್ನೇಹಿತನಾಗಿದ್ದರಿಂದ ಯಾವುದೇ ದಾಖಲೆ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

4. ಚೆಕ್ ನಲ್ಲಿರುವ ಎಲ್ಲಾ ಮಾಹಿತಿಯನ್ನು ಅವರೇ ಬರೆದಿರುತ್ತಾರೆ. ನಾನು ಚೆಕ್ ನ್ನು ನೋಡಿರುತ್ತೇನೆ, ಅದೇ ಚೆಕ್ ಇರುತ್ತದೆ. ನಾನು ಈಗ ಐಟಿ ಪಾವತಿ ಮಾಡುವುದಿಲ್ಲ, ಮುಂಚೆ ಮಾಡುತ್ತಿದ್ದೆ. ನೋಟಿಸು ಕೊಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಆರೋಪಿಗೂ ಈ ಚೆಕ್ ಗೂ ಯಾವುದೇ ಸಂಬಂಧ ಇರುವುದಿಲ್ಲ, ಆರೋಪಿತ ಯಾವುದೇ ಹಣವನ್ನು ಕೊಡಲು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ಬಾಡಿಗೆದಾರನಾಗಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ